**ನಾಂದಿಪದ**

# ಕನ್ನಡದ ನಡಿಗೆ ಮಕ್ಕಳ ಜೊತೆಗೆ

ಮಳೆ, ಚಳಿ, ಬಿಸಿಲುಗಳಿಗೆ ನಿರ್ದಿಷ್ಟ ಅವಧಿಗಳಿದ್ದಂತೆ ಕನ್ನಡ ಹರಳುಗಟ್ಟಲಿಕ್ಕೂ ಒಂದು ಕಾಲವಿದೆ. ನವೆಂಬರ್ ತಿಂಗಳು ಕನ್ನಡದ ಚಿಂತನೆಗಳು ತೀವ್ರಗೊಳ್ಳುವ ಕಾಲ. ಈ ಅವಧಿಯಲ್ಲಿ, ಬಹುತೇಕ ಕನ್ನಡ ವಿಚಾರಗಳು ಭಾವುಕತೆಯ ನೆಲೆಗಟ್ಟಿನಲ್ಲೂ, ಕೆಲವು ಚಿಂತನೆಗಳು ಬೌದ್ಧಿಕತೆಯ ತಳಹದಿಯಲ್ಲೂ ನಡೆಯುತ್ತವೆ. ಬೌದ್ಧಿಕತೆ ಹಾಗೂ ಭಾವುಕತೆಗಳನ್ನು ನೆಚ್ಚಿಕೊಂಡ ಇಬ್ಬರ ಕಣ್ಣಿಗೂ 'ನಮ್ಮ ಕನ್ನಡ' ಮಕ್ಕಳಿಗೂ ಸಂಬಂಧಿಸಿದ್ದು ಅನ್ನಿಸಿರುವ ಉದಾಹರಣೆಗಳು ಕಡಿಮೆ. ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಚಿಂತನೆಗಳು ನಡೆಯದಿರುವುದು ಕನ್ನಡದ ಈ ಹೊತ್ತಿನ ಸಂಕಟಗಳಿಗೂ ಆತಂಕಗಳಿಗೂ ಕಾರಣಗಳಲ್ಲೊಂದು. ಮಕ್ಕಳ ನಾಳೆಗಳು ಕನ್ನಡದ ನಾಳೆಗಳೂ ಹೌದೆನ್ನುವುದನ್ನು ನಾವು ಮರೆಯಬಾರದು.



ಚಿತ್ರ: ತಾಜುದ್ದೀನ್ ಆಜಾದ್

ಮಕ್ಕಳ ನಿರ್ಲಕ್ಷ್ಯಕ್ಕೆ ಸಾಹಿತ್ಯ ಕ್ಷೇತ್ರವೂ ಹೊರತಲ್ಲ. ಶಿಕ್ಷಣ ವ್ಯವಸ್ಥೆ ಮಕ್ಕಳ ಓದನ್ನು ಪಠ್ಯಕ್ಕೆ ಸೀಮಿತಗೊಳಿಸಿದೆ. ಪಠ್ಯಗಳಾಚೆಗಿನ ಓದು ಎಳೆಯರಿಗೆ ಅಗತ್ಯವೆಂದು ಪೋಷಕರಿಗೆ ಅನ್ನಿಸುತ್ತಿಲ್ಲ; ಅಂಥದೊಂದು ಓದಿಗೆ ಅಗತ್ಯವಾದ ಸಾಹಿತ್ಯವನ್ನು ಬರಹಗಾರರೂ ವ್ಯಾಪಕವಾಗಿ ಸೃಜಿಸುತ್ತಿಲ್ಲ. ಅನೇಕ ಮಾಧ್ಯಮಗಳು ಮಕ್ಕಳನ್ನು ಒಳಗೊಳ್ಳುವ ಸಣ್ಣ ಪ್ರಯತ್ನವನ್ನೂ ನಡೆಸಿಲ್ಲ. ಪತ್ರಿಕೆಗಳಲ್ಲಿ ಮಕ್ಕಳಿಗಾಗಿ ಇದ್ದ ಪುಟ್ಟ ಜಾಗವೂ ಕಣ್ಮರೆಯಾಗುತ್ತಿದೆ. ಆದರೆ, 'ಮಯೂರ' ಮಕ್ಕಳ ಸಾಹಿತ್ಯಕ್ಕೆ ಮೊದಲಿನಿಂದಲೂ ಆದ್ಯತೆ ನೀಡುತ್ತಿದೆ. ಇತ್ತೀಚಿನ ವರ್ಷಗಳ ನವೆಂಬರ್ ಸಂಚಿಕೆಗಳು ಮಕ್ಕಳ ಸಾಹಿತ್ಯದ ರೂಪದಲ್ಲಿ ಕನ್ನಡಪ್ರಜ್ಞೆಯನ್ನು ನೋಡುವ ಪ್ರಯತ್ನ ನಡೆಸಿವೆ. ಆ ಪ್ರಯತ್ನ ಈ ಸಂಚಿಕೆಯಲ್ಲೂ ಮುಂದುವರೆದಿದೆ. ಮಕ್ಕಳಿಗಾಗಿ ನಿಯಮಿತವಾಗಿ ಬರೆಯದ ಬರಹಗಾರರ ರಚನೆಗಳು ಇಲ್ಲಿವೆ. ಇದೇ ಮೊದಲ ಬಾರಿಗೆ ಮಕ್ಕಳಿಗಾಗಿ ಬರೆದವರ ಕಥೆ-ಪದ್ಯಗಳೂ ಇವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲಸಾಹಿತ್ಯ ಪುರಸ್ಕಾರ' ಪಡೆದ ಕೃಷ್ಣಮೂರ್ತಿ ಬಿಳಿಗೆರೆ ಅವರ ಸಂದರ್ಶನ ಸಂಚಿಕೆಯ ಮತ್ತೊಂದು ವಿಶೇಷ. ಎಲ್ಲ ವಯೋಮಾನದವರಿಗೂ ರುಚಿಸುವಂತಿರುವ 'ನಕ್ಷತ್ರಪಟ'ದ ಬರಹಗಳು ದೊಡ್ಡವರ ಮೂಲಕ ಮಕ್ಕಳಿಗೆ ತಲಪುತ್ತವೆನ್ನುವ ನಿರೀಕ್ಷೆ ನಮ್ಮದು.

ಎಂ.ಎಂ. ಕಲಬುರ್ಗಿ ಅವರ ವ್ಯಕ್ತಿತ್ವ-ವಿಚಾರಗಳನ್ನು ನೆನಪಿಸುವ 'ಮಹಾಮಾರ್ಗಿ ಕಲಬುರ್ಗಿ' ಈ ಸಂಚಿಕೆಯ ಮುಖ್ಯ ಬರಹಗಳಲ್ಲೊಂದು. ಕನ್ನಡ ಸಂಸ್ಕೃತಿಗೆ ಮಹತ್ವದ ಕೊಡುಗೆ ನೀಡಿದ ಹಿರಿಯರನ್ನು ನೆನಪಿಸಿಕೊಳ್ಳುವ, ಹೊಸ ಓದುಗರಿಗೆ ಪರಿಚಯಿಸುವ ನಿಟ್ಟಿನಲ್ಲಿ ಈ ಬರಹವನ್ನು ಗಮನಿಸಬೇಕು.

ದೀರ್ಘ ಕಾಲದಿಂದ ಬದಲಾಗದೆ ಉಳಿದಿದ್ದ 'ಮಯೂರ'ದ ಬೆಲೆ ಈ ಸಂಚಿಕೆಯಿಂದ ₹ 25 ಆಗಿದೆ. ಈ ಅನಿವಾರ್ಯತೆಯನ್ನು ಸಹೃದಯರಿಗೆ ಬಿಡಿಸಿ ಹೇಳುವ ಅಗತ್ಯವಿಲ್ಲ. ಎಂದಿನಂತೆ ನಿಮ್ಮ ಪ್ರತಿಕ್ರಿಯೆ, ಟೀಕೆ ಟಿಪ್ಪಣಿಗಳ ಬಗ್ಗೆ 'ಮಯೂರ ಬಳಗ'ದ್ದು ತೆರೆದ ಮನಸು.

**ಮಯೂರ ಬಳಗ**

editormy@mayura.co.in